ಘಳಿಗೆಗೊಮ್ಮೆ ಅಪ್‌ಲೋಡು, ಡೌನ್‌ಲೋಡು ಮಾಡಿಕೊಳ್ಳಲು ಅನುಕೂಲವಾಗಿರುವ ಇಂಟರ್ನೆಟ್ಟು, ವಾಟ್ಸ್‌ಆ್ಯಪ್, ಫೇಸ್‌ಬುಕ್, ಯೂಟ್ಯೂಬ್ ಅಂತೆಲ್ಲ ಈ ಚಾರ್ಜ್ ಹೀರಿಬಿಡುವ ಅಪ್ಲಿಕೇಶನ್‌ಗಳು ಇರಲಿಲ್ಲ. ಅದು ಸಾದಾಸೀದಾ ಹ್ಯಾಂಡ್‌ಸೆಟ್ ಆಗಿದ್ದರಿಂದ ಒಮ್ಮೆ ವಿದ್ಯುತ್ ಹರಿಸಿದರೆ ಸಾಕು, ಒಂದು ವಾರ ಯಾವುದೇ ಕಿರಿಕಿರಿಯಿಲ್ಲದೆ ದುಡಿಯುತ್ತಿತ್ತು. ಸೈಕಲ್ ಪೆಡಲ್ ತುಳಿಯುತ್ತಲೇ ಚಾರ್ಜ್ ಆಗುವಂತಹ ಬೈಸಿಕಲ್ ಕೂಡ ಆಗ ಮಾರುಕಟ್ಟೆಗೆ ಬಂದಿತ್ತು. ಅದರಂತೆ ನಮ್ಮಂತಹ 'ಮಾತೆ'ಯರಿಗೆ ಮಾತಾಡುತ್ತಲೇ ಮೊಬೈಲ್ ಚಾರ್ಜ್ ಆಗುವ ತಂತ್ರಜ್ಞಾನವುಳ್ಳ ಮಹಿಳಾಸ್ನೇಹಿ ಮೊಬೈಲ್‌ಗಳ ಆವಿಷ್ಕಾರವಾಗಲಿ ಎನ್ನುವುದು ನನ್ನ ಹೆಬ್ಬಯಕೆ. ಮುಂದಿನ ದಿನಗಳಲ್ಲಿ ಈ ಬಹುಶ್ರುತ ಸ್ಮಾರ್ಟ್ ಫೋನ್‌ಗಳಲ್ಲಿ ಈ ಸೌಲಭ್ಯವೂ ಬಂದರೆ ಅಚ್ಚರಿಯಿಲ್ಲ.

ಈಗೀಗ ಮನೆಗೆ ವಿಶೇಷ ಅತಿಥಿ ಅಭ್ಯಾಗತರು ಆಗಮಿಸಿದರೆ ಟೀ ಕಾಫೀಗೂ ಮುನ್ನ ಮನೆಯ ವೈಫೈ ಪಾಸ್‌ವರ್ಡ್ ಕೊಡುವುದು, ಅವರು ಚಾರ್ಜರ್ ಮರೆತಿದ್ದರೆ ನಮ್ಮದೇ ಒಂದನ್ನು ಅಡ್ಜಸ್ಟ್ ಮಾಡಿಸುವುದು, ಕೊಂಚ ಎತ್ತರವಿದ್ದವರ ಕೈಯಲ್ಲಿ ಮೊಬೈಲ್ ಕೊಟ್ಟು ಗ್ರೂಪ್ ಸೆಲ್ಫಿಗೆ ಹಲ್ಲು ಕಿರಿದು ನಿಲ್ಲುವುದು, ಈ ರೀತಿಯ ಘನ ಸೇವೆಗಳು ನಡೆಯುವುದು ಸಾಮಾನ್ಯ. ಇನ್ನು, ಮದುವೆ ಮತ್ತು ಇತರ ಸಮಾರಂಭಗಳಿಗೆ ಊರಿಗೆ ಹೋದಾಗ ಗಡಿಬಿಡಿಯಲ್ಲಿ ಉಡುಪು ವಸ್ತ್ರ ಮರೆತರೂ ಅಷ್ಟಾಗಿ ತಲೆ ಕೆಡಿಸಿಕೊಳ್ಳದ ನನಗೆ, ಅಕಸ್ಮಾತ್ ಚಾರ್ಜರ್ ಮರೆತರೆ ನನ್ನ ಮನಸ್ಸು ಚಾರ್ಜ್ ಹೋದ ಮೊಬೈಲ್‌ನಂತೆ ಆಗಿ ಬಿಡುತ್ತದೆ!

ಏನೇ ಅನ್ನಿ, ನಾವು ನಮ್ಮ ಮೊಬೈಲುಗಳನ್ನು ಅತಿಶಯವಾಗಿ ಪ್ರೀತಿಸುತ್ತಿದ್ದರೂ ಒಂದು ದಿನವೂ ಬಿಟ್ಟಿರಲಾರದಂತಹ ಪ್ರೇಮ ಇರುವುದು ಚಾರ್ಜರ್ ಮೇಲೆಯೇ. ಸೂಜಿ ಹಿಂದೆ ದಾರ ಓಡಿದಂತೆ ನೀನಿಲ್ಲದೆ ನಾನಿಲ್ಲ ಎಂದು ಜೀವಕಳೆ ತುಂಬುವ ಗೆಳೆಯನಂತೆ ಜೊತೆಯಾಗಿರುತ್ತದೆ. ಅದರಂತೆ, ನಮ್ಮೊಂದಿಗೆ ಒಡನಾಡುವ ಸಂಬಂಧಗಳು ಕಳೆಗುಂದತೊಡಗಿದಾಗ ಒಂದಿಷ್ಟು ಲವಲವಿಕೆಯ ಚಾರ್ಜ್ ಹರಿಸಿ ನಳನಳಿಸುವಂತೆ ಮಾಡುವಂತಿದ್ದರೆ ಜೀವನವೂ ಸುಂದರ ಹೂಬನದಂತೆ ಅರಳಬಹುದು, ಏನಂತೀರಿ?


**ಆರತಿ ಘಟಿಕಾರ್**

ಮೂಲತಃ ಬೆಳಗಾವಿ ಜಿಲ್ಲೆಯವರು. ಹಾಸ್ಯ ಲೇಖನ, ಲಲಿತ ಪ್ರಬಂಧ, ಕವನ, ಹನಿಗವನಗಳನ್ನು ಬರೆಯುತ್ತ ಬಂದಿದ್ದಾರೆ.

ಪ್ರಕಟಿತ ಪುಸ್ತಕಗಳು: 'ಹನಿ ಹನಿ ಚಿತ್ತಾರ', 'ಭಾವದ ಹಕ್ಕಿ' (ಹನಿಗವನ ಸಂಕಲನಗಳು), 'ಮಾತ್ರೆ ದೇವೋ ಭವ', 'ವಠಾರ ಮೀಮಾಂಸೆ' (ಹಾಸ್ಯ ಪ್ರಬಂಧ ಸಂಕಲನಗಳು). ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿದ್ದಾರೆ.